ಕರ್ನಾಟಕ ಸರ್ಕಾರ

ಸಂಖ್ಯೆ: ಕಾಇ 02 ಎಲ್‌ಎಂಡಬ್ಲ್ಯೂ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:16-03-2017

## ಅಧಿಸೂಚನೆ

ಕರ್ನಾಟಕ ರಾಜ್ಯಾದ್ಯಂತ "ಹತ್ತಿ ಹೆಕ್ಕುವ ಮತ್ತು ಅಮುಕುವ" ಉದ್ದಿಮೆಗಳಲ್ಲಿ ಯಾವುದೇ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ಕೆಳಕಂಡ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವಂತೆ ಕನಿಷ್ಠ ವೇತನವನ್ನು ಪರಿಷ್ಕರಿಸಲು ಸರ್ಕಾರವು ತೀರ್ಮಾನಿಸಿದೆ. 1948 ರ ಕನಿಷ್ಠ ವೇತನ ಕಾಯ್ದೆಯ (ಕೇಂದ್ರ ಕಾಯ್ದೆ ಸಂಖ್ಯೆ: XI) ಕಲಂ 3(1)(ಬಿ) ಮತ್ತು 5(1)(ಬಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಕರಡು ಅಧಿಸೂಚನೆಯನ್ನು ಪ್ರಕಟಿಸಲಾಗಿದೆ. ಈ ಕರಡು ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಎರಡು (2) ತಿಂಗಳ ಅವಧಿಯೊಳಗೆ ಭಾದಿತರಾಗುವ ವ್ಯಕ್ತಿಗಳಿಂದ ಸಲಹೆ/ ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದು. ತದನಂತರ ಬಂದ ಸಲಹೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಸಲಹೆ/ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಾರ್ವಜನಿಕರು/ ಉದ್ಯೋಗದಾತರು/ ಉದ್ಯೋಗಿಗಳು / ಸಂಘಸಂಸ್ಥೆಗಳು ಅವುಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, 4ನೇ ಮಹಡಿ, ವಿಕಾಸ ಸೌಧ, ಬೆಂಗಳೂರು-560001 ಇವರಿಗೆ ಅಥವಾ ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560029 ಇವರಿಗೆ ಸಲ್ಲಿಸಬಹುದಾಗಿರುತ್ತದೆ.

1948ರ ಕನಿಷ್ಠ ವೇತನ ಕಾಯ್ದೆಯ ಕಲಂ 3(1)(ಬಿ) ಮತ್ತು 5(1)(ಬಿ)ರಡಿಯಲ್ಲಿ ಪ್ರದತ್ತವಾದ ಅಧಿಕಾರದ ಮೇರೆಗೆ ಕರ್ನಾಟಕ ಸರ್ಕಾರವು ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವಂತೆ, ಕರ್ನಾಟಕ ರಾಜ್ಯಾದ್ಯಾಂತ ಯಾವುದೇ "ಹತ್ತಿ ಹೆಕ್ಕುವ ಮತ್ತು ಅಮುಕುವ" ಉದ್ದಿಮೆಗೆ ಈ ಕೆಳಕಂಡಂತೆ ಕನಿಷ್ಠ ವೇತನ ದರಗಳು ತಕ್ಷಣದಿಂದ ಜಾರಿಗೆ ಬರುವಂತೆ ಈ ಮೂಲಕ ಪರಿಷ್ಕರಿಸಲು ಪ್ರಸ್ತಾಪಿಸಿದೆ.

## ಅನುಸೂಚಿ

| ಕ್ರ ಸಂ | ಕೆಲಸದ ವರ್ಗಗಳು | ಕನಿಷ್ಠ ವೇತನ ದರಗಳು | | | | | |
|---|---|---|---|---|---|---|---|
| | | ವಲಯ-1 | | ವಲಯ-2 | | ವಲಯ-3 | |
| | | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| 1 | 1. ಕುಶಲ-ಎ | | | | | | |
| 1 | ಬಡಗಿ | 11061-60 | 425-45 | 10774-29 | 414-40 | 10056-00 | 386-77 |
| 2 | ಕಮ್ಮಾರರ | | | | | | |
| 3 | ಯಂತ್ರ ಕುಶಲ (ಮೆಕ್ಯಾನಿಕ್) | | | | | | |
| | 2. ಕುಶಲ-ಬಿ | | | | | | |
| 1 | ಕುದಿಪಾತ್ರೆ ನಿರ್ವಾಹಕ (Boiler man) | 10851-60 | 417-37 | 10569-74 | 406-53 | 9865-00 | 379-43 |
| 2 | ಕವಾಟ ನಿರ್ವಾಹಕ (Valve man) | | | | | | |
| 3 | ಯಂತ್ರಚಾಲಕ (Engine Driver) | | | | | | |
| 4 | ಜೋಡಣೆಗಾರ (Fitter) | | | | | | |
| 5 | ಟರ್ನರ್ | | | | | | |
| 6 | ಓಪನರ್ ಮ್ಯಾನ್ | | | | | | |

Scanned by CamScanner

| | | | | | | | |
|---|---|---|---|---|---|---|---|
| | **3. ಅರೆ ಕುಶಲ** | | | | | | |
| 1 | ಫೈರ್ ಮ್ಯಾನ್ | 10726-60 | 412-56 | 10447-98 | 401-84 | 9751-45 | 375-05 |
| 2 | ಸುರುಳಿ ಕತ್ತರಿಸುವವ | | | | | | |
| 3 | ನಂಬರ್ ಮೇಕರ್ಸ್ | | | | | | |
| 4 | ಫನಿಷಿಂಗ್ ಮ್ಯಾನ್ | | | | | | |
| | **4. ಕುಶಲರಲ್ಲದವರು –ಎ** | | | | | | |
| | ಮುಕದಂ | 10551-60 | 405-83 | 10277-53 | 395-29 | 9592-36 | 368-94 |
| | **5. ಕುಶಲರಲ್ಲದವರು –ಬಿ** | | | | | | |
| 1 | ಕಾವಲುಗಾರ, ಜವಾನ } ಕಛೇರಿ ಸಿಬ್ಬಂದಿ | | | | | | |
| 2 | ಕಛೇರಿ ಹುಡುಗ } ಕಛೇರಿ ಸಿಬ್ಬಂದಿ | | | | | | |
| 3 | ಗುಡಿಸುವವರು } ಕಛೇರಿ ಸಿಬ್ಬಂದಿ | | | | | | |
| 4 | ಹತ್ತಿಯ ಊಬನ್ನು ಎತ್ತುವ ಮತ್ತು ಶುಚಿ ಮಾಡುವುದಕ್ಕೆ ನೇಮಿಸಿಕೊಂಡ ಕೆಲಸಗಾರರು | 10521-60 | 404-68 | 10248-31 | 394-16 | 9565-08 | 367-88 |
| 5 | ಮಜ್ದೂರ್ ಮೇಲೆ ನಮೂದಿಸದ ಯಾವುದೇ ಕುಶಲಿಗಳಲ್ಲದವರು | | | | | | |
| 6 | ಹತ್ತಿ ಹೆಕ್ಕುವವ | | | | | | |

| | | | | | | | |
|---|---|---|---|---|---|---|---|
| | **ಚಾಲಕ / ಕ್ಲೀನರ್** | | | | | | |
| 1 | ಲಾರಿ ಡ್ರೈವರ್ | 12184-00 | 468-62 | 11872-00 | 456-62 | 11092-00 | 426-62 |
| 2 | ಕಾರ್/ಜೀಪ್ ಡ್ರೈವರ್ | 11456-00 | 440-61 | 11170-00 | 429-62 | 10520-00 | 404-61 |
| 3 | ಲಾರಿ/ ಕಾರ್/ಜೀಪ್ ಕ್ಲೀನರ್ | 10520-00 | 404-61 | 10260-00 | 394-61 | 9610-00 | 369-61 |

| | | | | | | | |
|---|---|---|---|---|---|---|---|
| | **ಕಛೇರಿ ಸಿಬ್ಬಂದಿ** | | | | | | |
| 1. | ಮ್ಯಾನೇಜರ್/ ಪರ್ಸನಲ್ ಆಫೀಸರ್ | 13900-00 | 534-61 | 13510-00 | 519-61 | 12600-00 | 484-62 |
| 2. | ಅಸಿಸ್ಟೆಂಟ್ ಮ್ಯಾನೇಜರ್/ ಅಸಿಸ್ಟೆಂಟ್ ಪರ್ಸನಲ್ ಮ್ಯಾನೇಜರ್ | 13380-00 | 494-62 | 12990-00 | 499.62 | 12210-00 | 469-62 |
| 3. | ಅಕೌಂಟೆಂಟ್ | 12860-00 | 494-62 | 12600-00 | 484.62 | 11820-00 | 454-62 |
| 4. | ಕ್ಯಾಷಿಯರ್/ಸೀನಿಯರ್ ಕ್ಲರ್ಕ್/ ಬುಕಿಂಗ್ ಕ್ಲರ್ಕ್ | 12600-00 | 484-62 | 12340-00 | 474-62 | 11560-00 | 444-62 |
| 5. | ಶೀಘ್ರಲಿಪಿಗಾರ/ ಕಂಪ್ಯೂಟರ್ ಆಪರೇಟರ್ | | | | | | |

Scanned by CamScanner

| | | | | | | | |
|---|---|---|---|---|---|---|---|
| 6. | ಸ್ಟೋರ್ ಕೀಪರ್/ ರಿಸೆಪ್ಷನಿಸ್ಟ್/ ಟೆಲಿಫೋನ್ ಆಪರೇಟರ್ | | | | | | |
| 7. | ಬೆರಳಚ್ಚುಗಾರ/ಡಾಟಾ ಎಂಟ್ರಿ ಆಪರೇಟರ್ | | | | | | |
| 8. | ಗುಮಾಸ್ತ/ಜೂನಿಯರ್ ಕ್ಲರ್ಕ್ | 12470-00 | 479-61 | 12080-00 | 464-61 | 11430-00 | 439-61 |
| 9. | ಆಫೀಸ್‌ಬಾಯ್/ ಪ್ಯೂನ್/ ವಾಚಮನ್/ ಸ್ವೀಪರ್/ ಅಟೆಂಡರ್. | 10520-00 | 404-61 | 10260-00 | 394-61 | 9610-00 | 369-61 |

**ಮೇಲ್ಕಂಡ ಕನಿಷ್ಠ ವೇತನ ದರಗಳನ್ನು ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನಿಗದಿಪಡಿಸಿದ್ದು, ಈ ಎಲ್ಲಾ ಷರತ್ತುಗಳನ್ನು ಯಥಾವತ್ತಾಗಿ ಉದ್ಯೋಗದಾತರು ಪಾಲಿಸಲು ಬಾಧ್ಯಸ್ಥರಿರುತ್ತಾರೆ.**

**1. ತುಟ್ಟಿಭತ್ಯೆ:-**

ತುಟ್ಟಿಭತ್ಯೆ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಮಾಡಲಾಗುತ್ತದೆ. ಹಿಂದಿನ ಕ್ಯಾಲೆಂಡರ್ ವರ್ಷದ ಹನ್ನೆರಡು (12) ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ಸರಾಸರಿ ಆಧಾರದ ಮೇಲೆ ಏಪ್ರಿಲ್ ಮೊದಲನೇ ದಿನಾಂಕದಂದು ಪ್ರತಿ ವರ್ಷ ಲೆಕ್ಕಾಚಾರ ಮಾಡತಕ್ಕದ್ದು. ಅಲ್ಲದೇ ಗ್ರಾಹಕ ಬೆಲೆ ಸೂಚ್ಯಂಕಗಳ ಸಂಖ್ಯೆಯ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ಲೆಕ್ಕ ಹಾಕಲಾಗುತ್ತದೆ. ಆದ್ದರಿಂದ ಮೊದಲ ಲೆಕ್ಕಾಚಾರವು ಗ್ರಾಹಕ ಬೆಲೆ ಸೂಚ್ಯಾಂಕದ (ಜನವರಿ 2015 ರಿಂದ ಡಿಸೆಂಬರ್ 2015)ರ ಸರಾಸರಿ ಆಧಾರದ ಮೇಲೆ 2016 ಏಪ್ರಿಲ್ 1 ನೇ ತಾರೀಖಿನಿಂದ ಜಾರಿಗೆ ಬರುತ್ತದೆ. ಗ್ರಾಹಕ ಬೆಲೆ ಸೂಚ್ಯಾಂಕ 6205 ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ ನಾಲ್ಕು (4) ಪೈಸೆಯಂತೆ ತುಟ್ಟಿ ಭತ್ಯೆಯನ್ನು ಪಾವತಿಸತಕ್ಕದ್ದು.

**ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ:-**

**ಅ) ಮಾಸಿಕ ವೇತನವನ್ನು ಪಡೆಯುವವರು:-**

**ತಿಂಗಳ ತುಟ್ಟಿಭತ್ಯೆ = ಪ್ರತಿ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳು (ಸಿ.ಪಿ.ಐ) x ತುಟ್ಟಿಭತ್ಯೆಯ ದರ x 30 ದಿನಗಳು**

2. ದಿನಗೂಲಿ ಗಳಿಕೆದಾರರ ಸಂದರ್ಭದಲ್ಲಿ ಮಾಸಿಕ ವೇತನ ದರಗಳನ್ನು ಇಪ್ಪತ್ತಾರು (26) ದಿನಗಳಿಂದ ವಿಭಾಗಿಸಿ, ನಾಲ್ಕು (4) ರಜಾ ದಿನಗಳಿಗೆ ವೇತನವನ್ನು ನೀಡುವುದೂ ಸೇರಿದಂತೆ ಈ ಕೆಳಕಂಡಂತೆ ಲೆಕ್ಕ ಹಾಕತಕ್ಕದ್ದು. ಭಾಗಿಸಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸುವುದು.

**ಆ) ದಿನಗೂಲಿ ವೇತನ ಪಡೆಯುವವರು :-**

**ದಿನದ ತುಟ್ಟಿಭತ್ಯೆ = ಪ್ರತಿ ವರ್ಷ ಹೆಚ್ಚಾಗುವ ಅಂಶಗಳು x ತುಟ್ಟಿಭತ್ಯೆಯ ದರ x 30**



3. ಮಹಿಳೆಯರು ಮತ್ತು ಪುರುಷರು ಒಂದೇ ರೀತಿಯ ಹಾಗೂ ಸಮ ಪ್ರಮಾಣದ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಉಭಯತ್ರರಿಗೂ ಸಮಾನ ದರದ ವೇತನಗಳನ್ನು ಉದ್ಯೋಗದಾತರು ಸಂದಾಯ ಮಾಡತಕ್ಕದ್ದು.

4. ಪ್ರಸ್ತುತ ಯಾವುದಾದರೊಂದು ಆಡಳಿತವರ್ಗದವರು ಕಾರ್ಮಿಕರಿಗೆ ಪಾವತಿಸುತ್ತಿರುವ ವೇತನ ದರಗಳು ಈ ಅಧಿಸೂಚನೆಯಲ್ಲಿ ನಿಗದಿಪಡಿಸಿದ ಕನಿಷ್ಠ ವೇತನಕ್ಕಿಂತ ಹೆಚ್ಚಾಗಿದ್ದಲ್ಲಿ, ಆ ಹೆಚ್ಚಿನ ಚಾಲ್ತಿಯಲ್ಲಿರುವ ವೇತನ ದರಗಳನ್ನೇ ಕಾರ್ಮಿಕರಿಗೆ ಸಂದಾಯ ಮಾಡುವುದನ್ನು ಮುಂದುವರೆಸತಕ್ಕದ್ದು.

5. ಅಧಿಸೂಚನೆಯಲ್ಲಿ ಕೆಲಸದ ವರ್ಗವನ್ನು ನಮೂದಿಸದೇ ಇರುವ ವರ್ಗಗಳಿಗೆ ಸೇರಿದ ಕಾರ್ಮಿಕರಿಗೆ ಅದೇ ಸ್ವರೂಪದ (ಸಮಾನ) ಕೆಲಸ ನಿರ್ವಹಿಸುತ್ತಿರುವ ಇತರೆ ವರ್ಗದ ಕಾರ್ಮಿಕರಿಗೆ ಪಾವತಿ ಮಾಡುತ್ತಿರುವ ವೇತನವನ್ನು ಸಂದಾಯ ಮಾಡತಕ್ಕದ್ದು.

Scanned by CamScanner

6. ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ ಎಂಟು (8) ಗಂಟೆಗಳ ಕೆಲಸದ ವೇತನವು ಅದೇ ತರಹದ ಕೆಲಸ ಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರಕೂಡದು. ಒಂದು ದಿನದ ಕೆಲಸ ಎಂದರೆ ಎಂಟು (8) ಗಂಟೆಗಳ ಕೆಲಸ ಎಂದು ತಿಳಿಯತಕ್ಕದ್ದು. ಕಾರ್ಮಿಕರನ್ನು ಎಂಟು (8) ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ ಅಂತಹ ಕಡಿಮೆ ಅವಧಿಗೆ ಅನುಗುಣವಾಗಿ ಕನಿಷ್ಠ ವೇತನವನ್ನು ಕರ್ನಾಟಕ ಕನಿಷ್ಠ ವೇತನ ನಿಯಮಗಳು, 1958ರ ನಿಯಮ 27 ರನ್ವಯ ವೇತನವನ್ನು ಆ ಕೆಲಸದ ವರ್ಗಕ್ಕೆ ನಿಗದಿಪಡಿಸಿ ದಿನದ ವೇತನದ ಆಧಾರದ ಮೇಲೆ ಲೆಕ್ಕ ಹಾಕುವುದು.

7. ವೇತನ ಲೆಕ್ಕಾಚಾರದಲ್ಲಿ ರೂಪಾಯಿಯ ಭಾಗಾಂಶವು ಬಂದ ಪಕ್ಷದಲ್ಲಿ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸುವುದು. ಸಂಸ್ಥೆಯಲ್ಲಿ ನಿಗದಿಪಡಿಸಿರುವ ವಾರದ ರಜೆ ಅಥವಾ ಹಬ್ಬದ ರಜಾ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಟ ವೇತನ ಕಾಯ್ದೆ, 1948 ಮತ್ತು ಅದರಡಿಯ ಕರ್ನಾಟಕ ನಿಯಮಗಳಿಗೆ ಒಳಪಟ್ಟು ಸಾಮಾನ್ಯ ವೇತನದ ಎರಡುಪಟ್ಟು ವೇತನವನ್ನು ಪಾವತಿ ಮಾಡತಕ್ಕದ್ದು.

8. ಕೆಲಸಗಾರರು ದಿನದ ನಿಗಧಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ ಅಂತಹ ಕಾರ್ಮಿಕರಿಗೆ ಹೆಚ್ಚುವರಿ ಅವಧಿಯ ಕೆಲಸಕ್ಕೆ ಕನಿಷ್ಠ ವೇತನ ಕರ್ನಾಟಕ ನಿಯಮಗಳು, 1958ರ ನಿಯಮ 27 ರನ್ವಯ ಆತನ ವೇತನದ ಎರಡುಪಟ್ಟು ವೇತನವನ್ನು ಪಾವತಿಸತಕ್ಕದ್ದು.

9. ತರಬೇತಿ ಪಡೆಯುವ ಉದ್ಯೋಗಿಗಳಿಗೆ (ಟ್ರೈನಿಗಳಿಗೆ) ಅನ್ವಯವಾಗುವ ಕಾಯ್ದೆ ಮತ್ತು ನಿಯಮಗಳನ್ವಯ ವೇತನವನ್ನು ಪಾವತಿಸತಕ್ಕದ್ದು.

10. ಈ ಅಧಿಸೂಚನೆಯಲ್ಲಿ ನಿಗಧಿಪಡಿಸಿರುವ ವೇತನ ದರಗಳನ್ನು ಮತ್ತು ಕಾಲಕಾಲಕ್ಕೆ ಹೆಚ್ಚಾಗುವ ತುಟ್ಟಿಭತ್ಯೆಯನ್ನು ಕಡ್ಡಾಯವಾಗಿ ಪಾವತಿಸತಕ್ಕದ್ದು.

11. ಈ ಅಧಿಸೂಚನೆಯ ವಲಯಗಳನ್ನು ಈ ಕೆಳಕಂಡಂತೆ ವಿಂಗಡಿಸಲಾಗಿದೆ.

| | |
|---|---|
| ವಲಯ–1 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ರಾಜ್ಯದ ಎಲ್ಲಾ ಮಹಾನಗರಪಾಲಿಕೆಗಳು ಮತ್ತು ಇವುಗಳಿಗೆ ಗೊತ್ತುಪಡಿಸಿದ ಆಗ್ಲೋಮರೇಷನ್ ಪ್ರದೇಶಗಳು |
| ವಲಯ–2 | ವಲಯ–1ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳು. |
| ವಲಯ–3 | ವಲಯ–1 ಮತ್ತು 2 ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಇತರೆ ಭಾಗಗಳು. |

12. ಈ ಅಧಿಸೂಚನೆಯಲ್ಲಿ ನಮೂದಿಸಿದ ಉದ್ಯೋಗಿಗಳನ್ನು ನಾಲ್ಕು ಪ್ರವರ್ಗಗಳನ್ನಾಗಿ ವಿಂಗಡಿಸಿದ್ದು, ಪ್ರತಿ ಪ್ರವರ್ಗದ ವ್ಯಾಖ್ಯಾನವು ಕೆಳಗಿನಂತಿರುತ್ತದೆ.

a. **Highly-Skilled (ಅತಿಕುಶಲ)**: A highly skilled worker is one who is capable of working efficiently and supervises efficiently the work of skilled employees.

b. **Skilled (ಕುಶಲ)**: A skilled employee is one, who is capable of working efficiently, of exercising considerable independant judgement and discharing his duties responsibly;

Scanned by CamScanner

c. **Semi-Skilled (ಅರೆಕುಶಲ):** A semi skilled employee is one, who does work generally of a well defined routine nature, wherein the major requirement is not so much of the judgement, skill and dexterity but of proper discharge of duties assigned to him for a relatively narrow job and important decisions are made by others. His work is thus limited to the performance of routine operation of limited scope; and

d. **Un-Skilled (ಅಕುಶಲ):** An unskilled employee is one, who does operations that involve the performance of simple duties which require exercise of little or no independent judgement or previous experience, although a familiarity with the occupational environment is necessary. His work may thus require in addition to physical exertion, familiarity with a vareity of articles or goods.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

A N. Radhamani

[ಎ.ಎನ್.ರಾಧಾಮಣಿ]
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ.

ಇವರಿಗೆ,

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ ಈ ಅಧಿಸೂಚನೆಯನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಸದರಿ ಪ್ರಕಟಣೆಯ 200 ಪ್ರತಿಗಳನ್ನು ಸರ್ಕಾರದ ಅಧೀನ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, 4ನೇ ಮಹಡಿ, ವಿಕಾಸಸೌಧ, ಬೆಂಗಳೂರು–1 ಇವರಿಗೆ, ಕಳುಹಿಸುವಂತೆ ಕೋರಲಾಗಿದೆ.

ಪ್ರತಿಗಳು:–

1. ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–29.
2. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ. (ಕಾರ್ಮಿಕ ಆಯುಕ್ತರ ಮೂಲಕ).
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು (ಕಾರ್ಮಿಕ ಆಯುಕ್ತರ ಮೂಲಕ).
4. ನಿರ್ದೇಶಕರು, ವಾರ್ತಾ ಇಲಾಖೆ, ಶಿವಾಜಿನಗರ, ಬೆಂಗಳೂರು.
5. ಸದಸ್ಯ ಕಾರ್ಯದರ್ಶಿ, ಕರ್ನಾಟಕ ಕನಿಷ್ಟ ವೇತನ ಸಲಹಾ ಮಂಡಳಿ, ಕಾರ್ಮಿಕ ಆಯುಕ್ತರ ಕಚೇರಿ, ಕಾರ್ಮಿಕ ಭವನ, ಬೆಂಗಳೂರು.
6. ಎಲ್ಲಾ ಜಿಲ್ಲೆಗಳ ಕಾರ್ಮಿಕ ಅಧಿಕಾರಿಗಳಿಗೆ (ಕಾರ್ಮಿಕ ಆಯುಕ್ತರ ಮೂಲಕ).
7. ಮಾನ್ಯ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ವಿಕಾಸಸೌಧ, ಬೆಂಗಳೂರು.
9. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿ.

Scanned by CamScanner